**<u>2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,</u>**
**<u>ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).</u>**
**<u>ಸ್ಪೆಷಲ್ ಕೇಸ್. ನಂ. 5014/2020</u>**

**ಪ್ರಾಸಾ -- 12**

**ಚಾಸಾ – 15**

ಸಾಕ್ಷಿಯ ಹೆಸರು – ಸತೀಶ

ತಂದೆಯ ಹೆಸರು – ಗೆಜ್ಜೆ

ವಯಸ್ಸು – 36 ವರ್ಷ

ವೃತ್ತಿ – ಕೂಲಿ ಕೆಲಸ

ವಿಳಾಸ – ಐಯನಕೆರೆ

ದಿಃ 14.11.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ</u>**

1. ನನಗೆ ಮೃತ ಲಕ್ಷ್ಮಿಯ ಪರಿಚಯ ಇದೆ. ದಿಃ 03.02.2020 ರಂದು ಲಕ್ಷ್ಮಿ ಬಾಳೆಲೆಗೆ ಕೆಲಸಕ್ಕೆ ಹೋಗಿದ್ದು, ಆಕೆಯನ್ನು ಆರೋಪಿ ಜೀಪಿನಲ್ಲಿ ಕೆಲಸಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಜೀಪಿನಲ್ಲಿ ಹೋಗುವಾಗ ಲಕ್ಷ್ಮಿ ಹಾಗೂ ಆರೋಪಿಗೆ ಜಗಳ ಆಗಿರುತ್ತದೆ. ಆರೋಪಿ ಹಾಗೂ ಲಕ್ಷ್ಮಿ ಪ್ರೀತಿಸುತ್ತಿದ್ದು ನಂತರ ಆರೋಪಿಯು ಬೇರೆ ಹುಡುಗಿಯನ್ನು ಪ್ರೀತಿಸಲು ಶುರು ಮಾಡಿದ ಕಾರಣ ಲಕ್ಷ್ಮಿ ಆರೋಪಿಯೊಂದಿಗೆ ಜಗಳ ಮಾಡಿರುತ್ತಾರೆ. ಆರೋಪಿಯು ಬಾಳೆಲೆಯಲ್ಲಿ ಲಕ್ಷ್ಮಿಗೆ ಕಳೆನಾಶಕ ಔಷಧಿ ಕುಡಿಸಿದ್ದು ನಂತರ ಆಕೆಯನ್ನು ಹಣಗೋಡು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಮಗೆ ಹಣಗೋಡು ಆಸ್ಪತ್ರೆಯಿಂದ ಕರೆ ಮಾಡಿ ಲಕ್ಷ್ಮಿ ಯನ್ನು ಚಿಕಿತ್ಸೆಗೆ ದಾಖಲಿಸಿದ ಬಗ್ಗೆ ಮಾಹಿತಿ ಬಂದಿರುತ್ತದೆ. ಆಕೆಯನ್ನು ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದ್ದರಿಂದ ಆಕೆಯನ್ನು ಕೆ ಆರ್ ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿತ್ತು. ದಿಃ 10.02.2020 ರಂದು ಸಂಜೆ 4.30 ಗಂಟೆಯ ಸುಮಾರಿಗೆ ಲಕ್ಷ್ಮಿ ಮರಣ ಹೊಂದಿರುತ್ತಾಳೆ. ಆಕೆಯ ಶವದ ಮರಣೋತ್ತರ ಪರೀಕ್ಷೆಯನ್ನು ಕೆ ಆರ್ ಆಸ್ಪತ್ರೆಯಲ್ಲಿ ಮಾಡಿರುತ್ತಾರೆ. ನಾನು ಅಲ್ಲಿ ಲಕ್ಷ್ಮಿಯ ಶವವನ್ನು ನೋಡಿರುತ್ತೇನೆ. ಈಗ ತೋರಿಸಿದ ನಿಪಿ 2 ರಲ್ಲಿ ಲಕ್ಷ್ಮಿಯ ಮೃತದೇಹ ಕಾಣಿಸುತ್ತಿದೆ. ಆಸ್ಪತ್ರೆಗೆ ಪೊಲೀಸರು ಬಂದಿದ್ದರು. ನಾನು ಅವರಿಗೆ ವಿಷಯ ತಿಳಿಸಿದ್ದೆ.

## ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

2. ನಾನು ಆರೋಪಿಯೊಂದಿಗೆ ಕೆಲಸಕ್ಕೆ ಹೋಗುತ್ತಿರಲಿಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಚಾಸಾ 3 ರವರೊಂದಿಗೆ ಬಂದಿರುತ್ತೇನೆ ಎಂದರೆ ಸರಿ. ಹನಗೋಡು ಆಸ್ಪತ್ರೆಯಿಂದ ವೈದ್ಯರು ಲಕ್ಷ್ಮಿಯವರ ತಂದೆಗೆ ಫೋನ್ ಮಾಡಿದ್ದರು. ನನಗೆ ನಂತರ ಲಕ್ಷ್ಮಿ ಯವರ ತಂದೆ ಫೋನ್ ಮಾಡಿದ್ದರು. ನನಗೆ ಯಾರೂ ಫೋನ್ ಮಾಡಿಲ್ಲ, ನಾನು ಚಾಸಾ 3 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಿ ಹಾಗೂ ಆರೋಪಿ ಪ್ರೀತಿಸುತ್ತಿದ್ದ ವಿಚಾರ ಹಾಗೂ ನಂತರ ಆರೋಪಿ ಬೇರೆ ಹುಡಗಿಯನ್ನು ಪ್ರೀತಿಸುತ್ತಿದ್ದ ವಿಚಾರವನ್ನು ನನಗೆ ಲಕ್ಷ್ಮಿ ಹೇಳಿದ್ದಳು. ಲಕ್ಷ್ಮಿ ನನ್ನ ಜೊತೆ ಈ ವಿಷಯ ತಿಳಿಸುವಾಗ ಅಲ್ಲಿ ಬೇರೆ ಯಾರು ಇರಲಿಲ್ಲ. ಲಕ್ಷ್ಮಿಯ ಮನೆಯಿಂದ ನಮ್ಮ ಮನೆ ಸುಮಾರು 30-40 ಅಡಿ ಅಂತರದಲ್ಲಿ ಇದೆ. ಲಕ್ಷ್ಮಿ ಅಥವಾ ಬೇರೆ ಯಾರೇ ಆಗಲೀ ನನಗೆ ಲಕ್ಷ್ಮಿ ಮತ್ತು ಆರೋಪಿ ಪ್ರೀತಿಸುತ್ತಿದ್ದ ವಿಚಾರ ತಿಳಿಸಿಲ್ಲ ಹಾಗೂ ನಾನು ಚಾಸಾ 3 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೆ ಆರ್ ಆಸ್ಪತ್ರೆಯಲ್ಲಿ ಲಕ್ಷ್ಮಿಯ ಮೃತ ದೇಹವನ್ನು ನೋಡಿಲ್ಲ ಹಾಗೂ ನಾನು ಅಲ್ಲಿಗೆ ಹೋಗಿಯೇ ಇಲ್ಲ ಎಂದರ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಕೂಡ ಹಾಗೂ ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಕೂಡ ಚಾಸಾ 3 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)